ಯೋಜನೆಗಳಿಂದ ಕೃಷ್ಣಾ ಕೊಳ್ಳದಲ್ಲಿ 646 ಟಿಎಂಸಿ ನೀರನ್ನು ಉಪಯೋಗಿಸಿಕೊಳ್ಳಬಹುದಾಗಿದೆ. ಈ ನೀರನ್ನು ಬಳಸಿಕೊಳ್ಳಲು ಯೋಜನೆಗಳು ಪ್ರಗತಿಯಲ್ಲಿದ್ದು ತ್ವರಿತ ಗತಿಯಲ್ಲಿ ಈ ಯೋಜನೆಗಳನ್ನು ಪೂರ್ಣಗೊಳಿಸಲು ಮತ್ತು ಉಳಿದ ನೀರನ್ನು ಬಳಸಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಉದ್ಭವಿಸುವುದಿಲ್ಲ.

ಈ) ಇಂದಿನ ದರದ ಪ್ರಕಾರ 3270 ಕೋಟಿ. ರೂ. ಗಳು. ಈ ವರ್ಷದ ಆಯವ್ಯಯದಲ್ಲಿ 248.30 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

ಉ) ಕರ್ನಾಟಕ ಕೃಷ್ಣಾ ಕೊಳ್ಳದ ಅಭಿವೃದ್ಧಿ ಪ್ರಾಧಿಕಾರ ರಚನೆ ಮತ್ತು ನೀರಾವರಿ ಬಾಂಡ್‌ಗಳ ಬಗ್ಗೆ ಕೇಂದ್ರ ಸರ್ಕಾರದೊಂದಿಗೆ ಅನುಮತಿಗಾಗಿ ವ್ಯವಹರಿಸಲಾಗುತ್ತಿದೆ.

ಸಂದೇಶ

ಉಪಾಧ್ಯಕ್ಷರು:– ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು. ನನಗೆ ಮಾನ್ಯ ಸಭಾಧ್ಯಕ್ಷರಿಂದ ಒಂದು ಪತ್ರ ಬಂದಿದೆ, ಅದನ್ನು ಸಭೆಯ ಮುಂದಿಡುತ್ತೇನೆ.

ದಿನಾಂಕ 28–12–1992ರಂದು ಮಾನ್ಯ ಸಭಾಧ್ಯಕ್ಷರಿಂದ ಈ ಕೆಳಕಂಡಂತೆ ಸಂದೇಶ ಬಂದಿರುತ್ತದೆ.

ಪೂರ್ವ ನಿರ್ಧರಿತ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಬೇಕಾಗಿರುವುದರಿಂದ ದಿನಾಂಕ 28ರಿಂದ 10 ದಿವಸಗಳ ಕಾಲ ಬೆಂಗಳೂರಿನಿಂದ ಹೊರಗೆ ಉಳಿಯಬೇಕಾದುದು ಅನಿವಾರ್ಯವಾಗಿದೆ. ಈ ಕಾರಣದಿಂದಾಗಿ ವಿಧಾನಸಭೆಯ ಕಾರ್ಯಕಲಾಪಗಳನ್ನು ತಾವು ನಡೆಸಿಕೊಂಡು ಹೋಗಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 9ನೇ ನಿಯಮದ ಮೇರೆಗೆ ಈ ಕೆಳಕಂಡ ಸದಸ್ಯರುಗಳನ್ನು ಪ್ರಸ್ತುತ ಅಧಿವೇಶನ ನಡೆಯುವ ಸಂದರ್ಭದಲ್ಲಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಗೈರುಹಾಜರಾದಂತಹ ಸಂದರ್ಭದಲ್ಲಿ ಅಧ್ಯಕ್ಷತೆಯನ್ನು ವಹಿಸಲು ನೇಮಿಸಲಾಗಿದೆ.

ಡಾ: ಎ.ಬಿ. ಮಲಕರೆಡ್ಡಿ
ಶ್ರೀಮತಿ ಮೋಟಮ್ಮ
ಶ್ರೀ ಕೆ.ಬಿ. ಕೋಳಿವಾಡ್
ಶ್ರೀ ಡಿ.ಎ. ಚಿನ್ನಪ್ಪ
ಶ್ರೀ ಬಸವರಾಜ ಪಾಟೀಲ್ ಅಟ್ಟೂರು
ಶ್ರೀಮತಿ ದಮಯಂತಿ ಬೋರೇಗೌಡ

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷಿಣಿಯವರೆ, ದಿನಾಂಕ 29–12–92ರ ಲಿಖಿತ ಮೂಲಕ ಉತ್ತರಿಸುವ ಎರಡನೆಯ ಪಟ್ಟಿಯಲ್ಲಿರುವ 101 ಪ್ರಶ್ನೆಗಳ ಪೈಕಿ, ಪ್ರಶ್ನೆಗಳ ಸಂಖ್ಯೆ 27, 28, 51, 190, 200, 241, 242, 308, 308ಎ, 723, 718, 589, 573, 580,749, 794ಮತ್ತು 246 ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನುಳಿದ 84ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ. ಹಾಗೂ ದಿನಾಂಕ 28–12–92ರ ಚುಕ್ಕೆ ಗುರುತಿನ ಮತ್ತು ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಹ ಸಭೆಯ ಮುಂದೆ ಮಂಡಿಸುತ್ತೇನೆ.